ಕರ್ನಾಟಕ ಸರ್ಕಾರ

ಜಿಲ್ಲಾಆಯುಷ್‌ಕಛೇರಿ, ಹೊಸಹಳ್ಳಿ, ಕಾರಸವಾಡಿರಸ್ತೆ, ಮಂಡ್ಯ– 571401.

ದೂರವಾಣಿ: 08232–220147, ಇ–ಮೇಲ್ ವಿಳಾಸ: dao.mandya09@gmail.com: 08232–220147

ಸಂ:ಜಿಆಕಮ/61/ಸಿ.ಎಸ್.ಎಸ್/2022–23 ದಿನಾಂಕ: 11–04–2025

## ಅಧಿಸೂಚನೆ

### ಗುತ್ತಿಗೆ ಆಧಾರದಲ್ಲಿ ಆಯುರ್ವೇದ ತಜ್ಞ ವೈದ್ಯರ ಹುದ್ದೆಯ ನೇಮಕಾತಿಗಾಗಿ ಪ್ರಕಟಣೆ.

ಆಯುಷ್ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ:Ayush/56/NAM/2025-DIRECTORATE OF AYUSH, ದಿನಾಂಕ:05–02–2025 ರಲ್ಲಿ ಕೇಂದ್ರ ಪುರಸ್ಕೃತ ಯೋಜನೆಯ ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಮೇಲ್ದರ್ಜೆಗೇರಿಸಲಾದ ಸರ್ಕಾರಿ ಆಯುಷ್ ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ತಾತ್ಕಲಿಕವಾಗಿ ಮಂಜೂರಾಗಿರುವ ತಜ್ಞ ವೈದ್ಯರು/ ಅರೆವೈದ್ಯಕೀಯ ಹುದ್ದೆಗಳು ಖಾಲಿ ಇದ್ದಲ್ಲಿ ಅವುಗಳನ್ನು ಈಗಾಗಲೇ ನೀಡಿರುವ ಆಯುಷ್ ನಿರ್ದೇಶನಾಲಯದ ಮಾರ್ಗಸೂಚಿಗಳನ್ವಯ ನೇಮಕಾತಿ ಮಾಡಿಕೊಳ್ಳಲು ಸೂಚಿಸಲಾಗಿದೆ. ಆದ್ದರಿಂದ ಈಗಾಗಲೇ ಕೇಂದ್ರ ಪುರಸ್ಕೃತ ಯೋಜನೆಯಡಿ ಮೇಲ್ದರ್ಜೆಗೇರಿಸಲಾದ ಸರ್ಕಾರಿ ಯುನಾನಿ ಚಿಕಿತ್ಸಾಲಯ, ಶ್ರೀರಂಗಪಟ್ಟಣ ಇಲ್ಲಿ ಖಾಲಿ ಖಾಲಿ ಇರುವ ಒಂದು ಆಯುರ್ವೇದ ತಜ್ಞ ವೈದ್ಯರ ಹುದ್ದೆಯನ್ನು ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ವಯ ಮತ್ತು ಮೆರಿಟ್ ಅನ್ವಯ ಪಾರದರ್ಶಕವಾಗಿ ಗುತ್ತಿಗೆ ಷರತ್ತುಗಳೊಳಪಟ್ಟು ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸ್ವೀಕರಿಸಲು ಈ ಪ್ರಕಟಣೆಯನ್ನು ನೀಡಲಾಗಿದೆ.

ಅಭ್ಯರ್ಥಿಗಳು ಅರ್ಜಿಯನ್ನು ಜಿಲ್ಲಾ ಆಯುಷ್ ಕಛೇರಿ, ಮಂಡ್ಯ ಇಲ್ಲಿ ಪಡೆದುಕೊಳ್ಳುವುದು. ಅರ್ಜಿಯನ್ನು ದಿನಾಂಕ:16–04–2025 ರಿಂದ 28–04–2025ರವರೆಗೆ ವಿತರಿಸಲಾಗುವುದು. ಭರ್ತಿ ಮಾಡಿದ ಅರ್ಜಿಯನ್ನು ಮಂಡ್ಯ ಜಿಲ್ಲಾ ಆಯುಷ್ ಕಛೇರಿಗೆ ಸಲ್ಲಿಸಲು ಕಡೆಯ ದಿನಾಂಕ: 02–05–2025ರ ಸಂಜೆ 5.00 ರವರೆಗೆ ನೋಂದಾಯಿತ ಅಂಚೆ ಮೂಲಕ ಸ್ವೀಕೃತವಾದ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು ನಂತರ ಬಂದಂತಹ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

| ಕ್ರ.ಸ | ಹುದ್ದೆಯ ಹೆಸರು | ಹುದ್ದೆ ಖಾಲಿ ಇರುವ ಸ್ಥಳ | ಕನಿಷ್ಠ ವಿದ್ಯಾರ್ಹತೆ | ಒಟ್ಟು ವೇತನ / ಮಾಸಿಕ | ಹುದ್ದೆಯ (ಪ್ರವರ್ಗಗಳ) ಮೀಸಲಾತಿ | ಹುದ್ದೆಗಳ ಸಂಖ್ಯೆ |
|---|---|---|---|---|---|---|
| 1 | ಆಯುರ್ವೇದ ತಜ್ಞ ವೈದ್ಯರು | ಶ್ರೀರಂಗಪಟ್ಟಣ | ಆಯುರ್ವೇದದಲ್ಲಿಸ್ನಾತಕೋತ್ತರ (ಕಾಯಚಿಕಿತ್ಸಾ, ಪಂಚಕರ್ಮ ಮತ್ತುಶಲ್ಯ ವಿಭಾಗದಲ್ಲಿ) ಪದವಿ ಹೊಂದಿರಬೇಕು. | 52,550/– + 5,000/– (ಸ್ನಾತಕೋತ್ತರ ಭತ್ಯೆ) | ಸಾಮಾನ್ಯ ಅಭ್ಯರ್ಥಿ (ಸಾಮಾನ್ಯ) | 1 |

1. ಮೇಲಿನ ಹುದ್ಧೆಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯು ಮೆರಿಟ್, ಅನುಭವ ಮತ್ತು ಸಂದರ್ಶನದ (ಕ್ರಮವಾಗಿ 70%, 20%, ಮತ್ತು 10% ಆಧಾರದ) ಮೂಲಕ ನೇಮಕಾತಿ ಮಾಡಲಾಗುವುದು.

2. ಈ ಮೇಲಿನ ತಜ್ಞ ವೈದ್ಯರ ಹುದ್ದೆಯು ಸಂಪೂರ್ಣ ತಾತ್ಕಲಿಕ ಹುದ್ದೆಯಾಗಿದ್ದು, ಆಯುಷ್ ನಿರ್ದೇಶನಾಲಯವು NAM ಯೋಜನೆ ಅಡಿ ಗುತ್ತಿಗೆ ಆಧಾರದ ನೇಮಕಾತಿಗಾಗಿ ವಿಧಿಸಿರುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
3. ಗುತ್ತಿಗೆ ನೇಮಕಾತಿಯು ಸಂಪೂರ್ಣ ತಾತ್ಕಾಲಿಕವಾಗಿದ್ದು, ದಿನಾಂಕ:31-03-2026 ಕ್ಕೆ ಅಂತ್ಯಗೊಳ್ಳುತ್ತದೆ. ಆರ್ಥಿಕ ವರ್ಷ ಕೊನೆಯ ದಿನ ಮುಕ್ತಾಯವಾದ ನಂತರ ಒಂದು ದಿನ ವಿರಾಮ (Break) ನೀಡಿ ತರುವಾಯ ಮುಂದಿನ ಆರ್ಥಿಕ ವರ್ಷದ ಕೊನೆಯ ದಿನಾಂಕದವರೆಗೆ ಗುತ್ತಿಗೆ ಸೇವೆಯನ್ನು ಮುಂದುವರೆಸುವ ಬಗ್ಗೆ ಆಯುಷ್ ನಿರ್ದೇಶನಾಲಯ ಮತ್ತು ಜಿಲ್ಲಾ ಆಯುಷ್ ಸಮಿತಿಯು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾಗುವುದು.
4. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳ ರೀತ್ಯ ನಿಗಧಿತ ವಯೋಮಿತಿಯಲ್ಲಿರುವ ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಕನಿಷ್ಠ 18 ವರ್ಷಗಳ, ಸಾಮಾನ್ಯ ಅಭ್ಯರ್ಥಿಗಳಿಗೆ ಗರಿಷ್ಠ 35 ವರ್ಷಗಳು, ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ ಗರಿಷ್ಠ 38 ವರ್ಷಗಳು, ಪ.ಜಾ, ಪ.ಪಂ ಮತ್ತು ಪ್ರವರ್ಗ-1 ಅಭ್ಯರ್ಥಿಗಳಿಗೆ ಗರಿಷ್ಠ 40 ವರ್ಷಗಳು, ಅಂಗವಿಕಲ ಅಭ್ಯರ್ಥಿ ಅಥವಾ ವಿಧವೆಯಾಗಿದ್ದಲ್ಲಿ 10 ವರ್ಷಗಳು ವಯೋಮಿತಿ ಸಡಿಲಿಕೆ. (ನಿಯಮಗಳು ಅನ್ವಯ)
5. ಹೆಚ್ಚಿನ ಮಾಹಿತಿಗೆ ಜಿಲ್ಲಾ ಆಯುಷ್ ಕಛೇರಿ, ಮಂಡ್ಯ ಇಲ್ಲಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/-
ಜಿಲ್ಲಾ ಆಯುಷ್ ಅಧಿಕಾರಿಗಳು ಹಾಗೂ
ಸದಸ್ಯ ಕಾರ್ಯದರ್ಶಿಗಳು, ಆಯ್ಕೆ ಸಮಿತಿ,
ಮಂಡ್ಯ ಜಿಲ್ಲೆ.